**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ನ್ಯಾಯಾಲಯ, ಹರಿಹರ**

**ಸಿ.ಸಿ. ನಂ. 2556/2022**

| | | |
|---|---|---|
| ಹೆಸರು | ಮಹೇಶ್ | ಪಿಡಬ್ಲ್ಯೂ-01 |
| ತಂದೆಯ ಹೆಸರು | ರಾಜಪ್ಪ | ಸಿಡಬ್ಲ್ಯೂ-01 |
| ವಯಸ್ಸು | 23 ವರ್ಷ | |
| ಉದ್ಯೋಗ | ಕೂಲಿ ಕೆಲಸ | ದಿಃ 03.04.2024 |
| ವಾಸ ಸ್ಥಳ | ಬೆಳ್ಳೂಡಿ ಗ್ರಾಮ | |
| ಮುಖ್ಯ ವಿಚಾರಣೆ | ಸಸಅ ರವರಿಂದ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಮೃತ ರಾಜಪ್ಪ ನನ್ನ ತಂದೆ. ಚಾಸಾ–7 ರವರು ನನ್ನ ಅಣ್ಣ. ಚಾಸಾ–2 ಮತ್ತು 3 ರವರ ಪರಿಚಯವಿದೆ. ಆರೋಪಿತರು ನನಗೆ ಗೊತ್ತು.

2. ದಿಃ 19.12.2021 ರಂದು ನಾನು, ನನ್ನ ತಂದೆ ಮೃತ ರಾಜಪ್ಪ, ಚಾಸಾ–7 ಮತ್ತು 2 ನೇ ಆರೋಪಿ ಎಲ್ಲರೂ ಸೇರಿಕೊಂಡು ಟ್ರಾಕ್ಟರ್ ನಲ್ಲಿ ಭತ್ತದ ಹುಲ್ಲನ್ನು ಹೇರಿಕೊಂಡು ಶಿವಮೊಗ್ಗ ರಸ್ತೆಯ ಮಾರ್ಗವಾಗಿ ಬೆಳ್ಳೂಡಿಗೆ ಹೋಗುತ್ತಿರುವಾಗ ರೋಷನಿ ಪ್ಯಾಲೇಸ್ ಡಾಬಾದ ಹತ್ತಿರ ನಮ್ಮ ಟ್ರಾಕ್ಟರ್ ಹಿಂದಿನಿಂದ ಒಂದು ಕಾರು ಬಂದು ಡಿಕ್ಕಿ ಪಡಿಸಿರುತ್ತದೆ. ನಾವೆಲ್ಲರೂ ಟ್ರಾಕ್ಟರ್ ಇಂಜಿನ್ ನ ಮೇಲೆ ಕುಳಿತಿದ್ದೇವು. ಸದರಿ ಅಪಘಾತದಲ್ಲಿ ನಮ್ಮ ತಂದೆ ರಾಜಪ್ಪ ಮತ್ತು ಚಾಸಾ–7 ರವರು ಹಾಗೂ ನಾನು ಎಲ್ಲರೂ ಕೆಳಗೆ ಬಿದ್ದಿರುತ್ತೇವೆ. ಆಗ ನನ್ನ ತಂದೆಯ ತಲೆಗೆ ಪೆಟ್ಟಾಗಿ ಪ್ರಜ್ಞೆ ತಪ್ಪಿತ್ತು. ಚಾಸಾ–7 ರವರ ಕಾಲಿಗೆ ಪೆಟ್ಟಾಗಿತ್ತು. ನನಗೆ ಯಾವುದೇ ಗಾಯಗಳು ಆಗಿರಲಿಲ್ಲ. ಟ್ರಾಕ್ಟರ್ ನ್ನು 2 ನೇ ಆರೋಪಿ ಚಲಾಯಿಸುತ್ತಿದ್ದ. ನಂತರ ನಾನು ನನ್ನ ತಂದೆ ಹಾಗೂ ಚಾಸಾ–7 ರವರನ್ನು ಹರಿಹರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಚಿಗಟೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಏನಪೋಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿಂದ ಹರಿಹರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬರುವಷ್ಟರಲ್ಲಿ ನನ್ನ ತಂದೆ ಮೃತಪಟ್ಟಿದ್ದರು. ಸದರಿ ಅಪಘಾತವಾದಾಗ ರಾತ್ರಿ 9.30 ಗಂಟೆ ಆಗಿತ್ತು. ಸದರಿ ಅಪಘಾತ ಕಾರು ಚಾಲಕನ ತಪ್ಪಿನಿಂದ ಸಂಭವಿಸಿರುತ್ತದೆ. ಕಾರು ಚಾಲಕ ಹಿಂದಿನಿಂದ ಜೋರಾಗಿ ಬಂದು ನಮ್ಮ ಟ್ರಾಕ್ಟರ್ ಗೆ ಡಿಕ್ಕಿಪಡಿಸಿರುತ್ತಾನೆ. ಸದರಿ ಕಾರು ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ 1 ನೇ

ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಅಪಘಾತದ ದಿನ ಕಾರನ್ನು ಆತನೇ ಚಲಾಯಿಸುತ್ತಿದ್ದ ಎಂದು ಹೇಳುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶವನ್ನು ಕೋರುತ್ತಿದ್ದು, 400/–ಗಳ ಖರ್ಚಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ,
ಹರಿಹರ